ಹೇಳಬೇಕೆಂದು ಮಾಡಿದ್ದೆ ಅವರು ಬಹಳ ದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇದರ ಬಗ್ಗೆ ಸಮಗ್ರವಾದ ಚರ್ಚೆಯಾಗಬೇಕು.

ಅಧ್ಯಕ್ಷರು: ತಾವು ಅರ್ಧಗಂಟೆ ಕಾಲ ಚರ್ಚೆಗೆ ಕಾಲಾವಕಾಶ ಬೇಕೆಂದು ಕೇಳುತ್ತಿದ್ದೀರಿ, ಆ ವಿಷಯವನ್ನು ನನಗೆ ಬಿಡಿ.

ಶ್ರೀ ಎ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಅರ್ಧಂಬರ್ಧ ಉತ್ತರವನ್ನು ಕೊಟ್ಟಿದ್ದಾರೆಂದು ಹೇಳುತ್ತಿರುವುದು ಪ್ರೊಸೀಂಡಿಗ್ಸ್‌ಗೆ ಹೋಗಿದೆ, ಅದನ್ನು ತೆಗೆಸಿ ಹಾಕಬೇಕು. ನಾನು ಉತ್ತರವನ್ನು ಅರ್ಧಂಬರ್ಧ ಕೊಟ್ಟಿರುವುದಿಲ್ಲ, ಫುಲ್‌ಫ್ಲೇಡ್ಜ್ ಉತ್ತರವನ್ನು ಕೊಟ್ಟಿದ್ದೇನೆ. ಇದರ ಬಗ್ಗೆ ಅರ್ಧಗಂಟೆ ಚರ್ಚೆ ಏಕೆ? ಬೇಕಾದರೆ ಒಂದು ಗಂಟೆಯಾದರೂ ಚರ್ಚೆಯನ್ನು ಮಾಡಬಹುದು.

ಅಧ್ಯಕ್ಷರು: ಅವರು ಉತ್ತರವನ್ನು ಬಹಳ ದೀರ್ಘವಗಿ ಕೊಡುತ್ತಾರೆ, ನಾನೇ ಉತ್ತರ ಬಹಳ ದೀರ್ಘವಾಯಿತು ಎಂದು ಹೇಳಬೇಕೆಂದು ಮಾಡಿದ್ದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಾನು ಮೊನ್ನೆ ವಿಷಯವನ್ನು ಪ್ರಸ್ತಾಪ ಮಾಡಿದೆ, ರಾಯಭಾಗಕ್ಕೆ ಬೇಕಾದರೆ ಗ್ಯಾರಂಟಿಯನ್ನು ಕೊಡುತ್ತಾರೆ, ಮೈಸೂರಿಗೆ ಏಕೆ ಗ್ಯಾರಂಟಿಯನ್ನು ಕೊಡುವುದಿಲ್ಲ? ಕೇಳುವುದಕ್ಕೆ ನಮ್ಮ ಹತ್ತಿರ ಕೆಲವೊಂದು ಹಿಂದಿನ ಪ್ರಶ್ನೆಗಳು ಇವೆ.

ಮೈಸೂರು ನಗರದ ರಸ್ತೆಗಳ ದುರಸ್ತಿ

282 (2685)

ಶ್ರೀ ಗುರುಸ್ವಾಮಿ ಎ.ಎಸ್ (ಚಾಮುಂಡೇಶ್ವರಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮೈಸೂರು ನಗರದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ನಗರಪಾಲಿಕೆಗೆ ಸೇರಿದ, ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಹಾಗೂ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುವ ಳ ಬಗೆಯ ರಸ್ತೆಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರಸ್ತೆಗಳ ದುರಸ್ತಿ ಹಾಗೂ ನಿರ್ವಹಣೆಗಾಗಿ ಈ ರಸ್ತೆಗಳನ್ನು ಮೈಸೂರು

ನಗರಪಾಲಿಕೆಗೆ ವಹಿಸಿಕೊಡಲು ಸರ್ಕಾರವು ಕ್ರಮಗೊಳ್ಳುವುದೇ;

ಇ) ಈ ರೀತಿ ರಸ್ತೆ ವ್ಯವಸ್ಥೆಯು ರಾಜ್ಯದ ಇತರೇ ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿಯೂ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಮೈಸೂರು ನಗರದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ನಗರಪಾಲಿಕೆ ಪರಿಮಿತಿಯಲ್ಲಿ 32.82 ಕಿ.ಮೀ. ರಸ್ತೆಯು ಇದ್ದು, ಇದರಲ್ಲಿ 11.20 ಕಿ.ಮೀ ಉದ್ದದ ರಸ್ತೆಯನ್ನು ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ಎ.ಡಿ.ಬಿ) ನೆರವಿನಿಂದ ಅಭಿವೃದ್ಧಿಗೊಳಿಸಲು ಮೈಸೂರು ನಗರ ಪಾಲಿಕೆಗೆ ಹಸ್ತಾಂತರಿಸಲಾಗಿದೆ.

ಇ) ಹೌದು ಬಂದಿದೆ.

ಶ್ರೀ ಎ.ಎಸ್.ಗುರುಸ್ವಾಮಿ: ಮಾನ್ಯ ಅಧ್ಯಕ್ಷರೆ, ನಮ್ಮ ಮೈಸೂರು ನಗರದಲ್ಲಿ 4 ತರಹದ ರಸ್ತೆಗಳು ಇವೆ. ಒಂದು ಊರಿನಲ್ಲಿ ಒಂದೇ ತರಹದ ರಸ್ತೆಗಳಿದ್ದರೆ ಕೆಲಸವಾಗುವುದಿಲ್ಲ. ಆ 4 ತರಹದ ರಸ್ತೆಗಳನ್ನು ಯಾರೂ ಮಾಡುವುದಕ್ಕೆ ತಯಾರಿಲ್ಲ. ಮುನ್ಸಿಪಾಲಿಟಿಯವರು ಮೂಡಾದವರ ಮೇಲೆ ಹೇಳುತ್ತಾರೆ. ಮೂಡಾದವರು ಜಿಲ್ಲಾ ಪಂಚಾಯಿತಿಯವರ ಮೇಲೆ ಹೇಳುತ್ತಾರೆ, ಜಿಲ್ಲಾ ಪಂಚಾಯತಿಯವರು ಸರ್ಕಾರದ ಮೇಲೆ ಹೇಳುತ್ತಿದ್ದಾರೆ. ಹೀಗಾಗಿ ಅಲ್ಲಿ ರಸ್ತೆಗಳ ಕೆಲಸವಾಗುತ್ತಿಲ್ಲ. ಒಬ್ಬರನ್ನೊಬ್ಬರು ಬೈದುಕೊಂಡು ತಿರುಗಾಡುವಂತಹ ಪರಿಸ್ಥಿತಿ ಬಂದಿದೆ. ಈಗ ಶಾಸಕರು, ಕಾರ್ಪೊರೇಟರ್‌ಗಳು ಬೈಗಳಗಳನ್ನು ತಿನ್ನುವಂತಹ ಪರಿಸ್ಥಿತಿಯಲ್ಲಿ ಇವತ್ತು ನಾವಿದ್ದೇವೆ. ಒಂದು ಏಜೆನ್ಸಿಯ ಮೂಲಕ ಇಡೀ ಮೈಸೂರುನಗರದಲ್ಲಿರುವ ಎಲ್ಲಾ ರಸ್ತೆಗಳನ್ನು ಮಾಡಬೇಕೆಂದು ಕಾನೂನನ್ನು ಸರ್ಕಾರ ಜಾರಿಗೆ ತರಬೇಕು. ಇದನ್ನು ಜಾರಿಗೆ ತಂದರೆ ಉತ್ತಮವಾದ ಕೆಲಸಗಳು ಆಗುತ್ತವೆನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಉತ್ತರವನ್ನು ಕೊಡುವ ಸಂದರ್ಭದಲ್ಲಿ ಎರಡನೇ ಪ್ರಶ್ನೆಗೆ 4 ತರಹದ ಏಜೆನ್ಸಿಗಳು ಇವೆ ಎಂದು ಹೇಳಿದ್ದೀರಿ. ಮೂಡಾದಲ್ಲಿ ಎಷ್ಟು ಕಿಲೋಮೀಟರ್ ರಸ್ತೆ ಇದೆ ಎಂದರೆ ಅದಕ್ಕೆ ತಾವು ಉತ್ತರವನ್ನು ಕೊಟ್ಟಿಲ್ಲ. ಕೇವಲ ನಗರ ಪಾಲಿಕೆಯಲ್ಲಿ 32.82 ಕಿ.ಮೀ ರಸ್ತೆ ಮಾತ್ರ ಇದೆ ಎಂದು ಹೇಳುತ್ತಿದ್ದೀರಿ. ಲೋಕೋಪಯೋಗಿ ಇಲಾಖೆಯದು ಎಷ್ಟು ಕಿಮೀ ರಸ್ತೆ ಇದೆ ಎನ್ನುವುದನ್ನು ಇಲ್ಲಿ ಮೆನ್‌ಷನ್ ಮಾಡಿರುವುದಿಲ್ಲ. ಜಿಲ್ಲಾ ಪಂಚಾಯಿತಿಯಲ್ಲಿ ಎಷ್ಟು ಕಿ.ಮೀ ರಸ್ತೆ ಬರುತ್ತದೆನ್ನುವುದನ್ನು ನನಗೆ ಕೊಟ್ಟಿರುವ ಉತ್ತರದಲ್ಲಿ ಸಮರ್ಪಕವಾಗಿ ನೀಡಿರುವುದಿಲ್ಲ. ದಯಮಾಡಿ ಈ ನಾಲ್ಕು ಏಜೆನ್ಸಿಗಳ ಮುಖಾಂತರ ಬರುವಂತಹ ರಸ್ತೆಗಳು ಎಷ್ಟೆಷ್ಟು ಕಿ.ಮೀ. ಎಂದು ಮೊದಲು ನಿರ್ಧಾರ

ಆಗಬೇಕು. ಹಿಂದೆ ಕೂಡ ಮಾಡುತ್ತೇವೆ ಎನ್ನುವ ತರಹ ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಲೋಕೋಪಯೋಗಿ ಸಚಿವರು ದಯಮಾಡಿ ತಿಳಿಸಬೇಕು, ನಾವು ಈ ರೀತಿಯಾಗಿ ಬೈಗುಳಗಳನ್ನು ತಿನ್ನುವುದನ್ನು ಕೊನೆಗಾಣಿಸಬೇಕೆಂದು ನಾನು ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ. 'ಮಾಡುತ್ತೇವೆ, ಮಾಡುತ್ತೇವೆ' ಎನ್ನುವ ಬದಲು, you please promise us as to what is the time-bound action. ಯಾವಾಗ ತಾವು ಇದನ್ನು ಮುಗಿಸುತ್ತೀರಿ, ನಿಖರವಾಗಿ ಇದನ್ನು ಯಾವಾಗ ಮುಗಿಸುತ್ತೀರಿ ಎನ್ನುವ ಬಗ್ಗೆ ಈ ಸಭೆಗೆ ತಿಳಿಸಬೇಕೆಂದು ನಾನು ಅವರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಮಾನ್ಯ ಗುರುಸ್ವಾಮಿಯವರು ಮೈಸೂರು ನಗರದಲ್ಲಿ ಲೋಕೋಪಯೋಗಿ ಇಲಾಖೆ, ಮೂಡಾ ಹಾಗೂ ಕಾರ್ಪೊರೇಷನ್‌ದಿಂದ ಬರತಕ್ಕಂಥ ರಸ್ತೆಗಳ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಲೋಕೋಪಯೋಗಿ ಇಲಾಖೆಯ ರಸ್ತೆ 32 ಕಿ.ಮೀ. ಇದೆ. ಕಾರ್ಪೊರೇಷನ್‌ನವರದು ಕೂಡ ಅವರ ವ್ಯಾಪ್ತಿಯಲ್ಲಿ ಬರತಕ್ಕಂಥ ರಸ್ತೆಗಳನ್ನು ಸರಿಯಾಗಿ ಮಾಡುವ ಜವಾಬ್ದಾರಿ ಅವರಿಗಿರುತ್ತದೆ. ಮೂಡಾದವರು ಅವರ ರಸ್ತೆಗಳನ್ನು ಮಾಡುವ ಜವಾಬ್ದಾರಿ ಅವರಿಗಿರುತ್ತದೆ, ಅವರು ಮಾಡುತ್ತಾರೆ. ನಾನು ಮೂರು ತಿಂಗಳ ಹಿಂದೆ ಮೈಸೂರು ನಗರಕ್ಕೆ ಹೋದಾಗ 32 ಕಿ.ಮೀ ರಸ್ತೆಯ ಬಗ್ಗೆ ನಮ್ಮ ಅಧಿಕಾರಿಗಳು ಈಗಾಗಲೇ ಆ್ಯಕ್ಷನ್ ಪ್ಲಾನ್ ರೆಡಿ ಮಾಡಿ ವೆಸ್ಟ್‌ರ್ನ್ ಗೇಟಿನಲ್ಲಿರತಕ್ಕಂಥ 1.3 ಕಿ.ಮೀ. ರಸ್ತೆಗೆ 2.7 ಲಕ್ಷ ರೂಪಾಯಿಗಳನ್ನು ನಾವು ಈಗಾಗಲೇ ಖರ್ಚು ಮಾಡಿ ಫೆಬ್ರವರಿ ತಿಂಗಳಲ್ಲಿ ಪೂರ್ತಿ ಕೆಲಸ ಮಾಡಿರುತ್ತೇವೆ. ಪ್ರಿನ್ಸ್‌ಸ್ ಸರ್ಕಲ್ ಎಂದು ಇದೆ, ಇದು ಬಹಳ ಪ್ರಮುಖವಾದದ್ದು ಮೈಸೂರು ಅರ್ಬನ್ ವಾಟರ್ ಸಪ್ಲೈಸ್ ಪೈಪ್‌ಲೈನ್ ಕೂಡ ಅಲ್ಲಿ ಲೀಕೇಜ್ ಆಗುತ್ತಿತ್ತು. ನಾನು ಮೈಸೂರಿಗೆ ವಿಸಿಟ್ ಹೋದಾಗ ಹಾಗೂ ಮೈಸೂರಿನ ಮೇಯರ್ ಜೊತೆಯಲ್ಲಿ ನೋಡಿದೆ; ಅಲ್ಲಿನ ಒಂದು ಬಡಾವಣೆಯಲ್ಲಿ ಒಂದು ಶಾಲೆಯ ಹುಡುಗಿ ಸತ್ತು ಹೋಗಿತ್ತು. ಅಲ್ಲಿ 3 ಲಕ್ಷ ರೂಪಾಯಿ ರಸ್ತೆಯನ್ನು ಕೂಡ ನಾವು ಮಾಡಿ ಮುಗಿಸಿರುತ್ತೇವೆ. ರೈಲ್ವೆ ಸ್ಟೇಷನ್ ಪಕ್ಕದಲ್ಲಿ ಆಯುರ್ವೇದಿಕ್ ಕಾಲೇಜಿನ ಹತ್ತಿರ 6 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ರಸ್ತೆ ಮಾಡಿರುತ್ತೇವೆ. 11.7 ಲಕ್ಷ ರೂಪಾಯಿಗಳ ಖರ್ಚಿನಲ್ಲಿ 4 ಮುಖ್ಯರಸ್ತೆಗಳ ಕೆಲಸವನ್ನು ಮಾಡುತ್ತಿದ್ದೇವೆ. ರಾಜ್ಯದಲ್ಲಿ ರಸ್ತೆಗಳಿಗಾಗಿ 75 ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥ ಕಾರ್ಯಕ್ರಮ ಇದೆ. ಜಿಲ್ಲಾ ಪಂಚಾಯಿತಿ ಹಾಗೂ ಬೇರೆ ಬೇರೆಯವರಿಗೆ ಬರತಕ್ಕಂಥ ರಸ್ತೆಗಳನ್ನು ಅವರು ಜವಾಬ್ದಾರಿಯಿಂದ ಮಾಡುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಗೆ ಬರತಕ್ಕಂಥ ರಸ್ತೆಗಳ ಜವಾಬ್ದಾರಿ ನಮ್ಮ ಮೇಲೆ ಇದೆ. ಇದರ ಬಗ್ಗೆ ವಿಶೇಷವಾಗಿ ಮೈಸೂರು ನಗರದಲ್ಲಿ ಪ್ರಥಮವಾಗಿ ಎಲ್ಲ ಕಾಮಗಾರಿಗಳನ್ನು ಮಾಡತಕ್ಕಂಥಾದ್ದನ್ನು ನಾವು ಮಾಡುತ್ತಿದ್ದೇವೆ.

SRI A.S.GURUSWAMY: There should be one agency which should execute all the works. There should not be four agencies. ದಯಮಾಡಿ ಮಾನ್ಯ ಮಂತ್ರಿಗಳು ಒಂದೇ ಏಜಿನ್ಸಿ ಮೂಲಕ ಎಲ್ಲ ಕೆಲಸಗಳನ್ನು ಮಾಡಿಸುತ್ತೇನೆ ಎನ್ನುವ ಭರವಸೆಯನ್ನು ಕೊಡಬೇಕೆಂದು ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿರತಕ್ಕಂಥ ಸ್ಟೇಟ್ ಹೈವೇ ಆಗಲಿ, ಬೇರೆ ಬೇರೆ ಎಂಡಿರ್ ರಸ್ತೆಗಳಾಗಲೀ ಕಾರ್ಪೊರೇಷನ್‌ನಲ್ಲಿ ಬರತಕ್ಕಂಥ ರಸ್ತೆಗಳು, ಅದು ಅವರ ಕೆಲಸವಾಗಿರುತ್ತದೆ. ಇವತ್ತು ಕಾರ್ಪೊರೇಷನ್‌ದವರು ಟ್ಯಾಕ್ಸ್ ವಸೂಲು ಮಾಡುತ್ತಾರೆ. ಅವರು ರಸ್ತೆಗಳನ್ನು ಮಾಡುವ ಜವಾಬ್ದಾರಿ ಅವರ ಮೇಲಿರುತ್ತದೆ. ಲೋಕೋಪಯೋಗಿ ಇಲಾಖೆ ಮಾಡತಕ್ಕಂಥ ಕೆಲಸಗಳನ್ನು ಮಾಡುತ್ತದೆ. ಜಿಲ್ಲಾ ಪಂಚಾಯಿತಿಯ ಕೆಲಸವನ್ನು ಅವರು ಮಾಡುತ್ತಾರೆ, ಸಬ ಕಾರ್ಪೊರೇಷನ್‌ದವರು ಅವರ ಕೆಲಸವನ್ನು ಅವರು ಮಾಡುತ್ತಾರೆ. ಟೌನ್ ಮುನ್ಸಿಪಲ್‌ನವರು ತಮ್ಮ ಕೆಲಸವನ್ನು ಅವರು ಮಾಡುತ್ತಾರೆ.

ಶ್ರೀ ಎಂ.ಎಸ್.ಆತ್ಮಾನಂದ್: ಮಾನ್ಯ ಗುರುಸ್ವಾಮಿಯವರು ಹೇಳತಕ್ಕಂಥ ಪರಿಸ್ಥಿತಿ ಎಲ್ಲಾ ನಗರಗಳಲ್ಲಿ ಇದೆ. ನಗರ ಪ್ರದೇಶಗಳಲ್ಲಿರತಕ್ಕಂಥ ರಸ್ತೆಗಳು, ಸುಮಾರು 2-3 ಕಿ.ಮೀ.ಗೆ ಒಂದರಂತೆ ಒಂದೊಂದು ಇಲಾಖೆಗೆ ಸಂಬಂಧಪಟ್ಟಂತೆ ಬರುತ್ತವೆ. ನಗರದಲ್ಲಿರುವ ಎರಡು ಮೂರು ಕಿ.ಮೀ. ಜಿಲ್ಲಾಪಂಚಾಯಿತಿ ಅಥವಾ ಕಾರ್ಪೊರೇಷನ್ ರಸ್ತೆಯನ್ನು ಲೋಕೋಪಯೋಗಿ ಇಲಾಖೆ ವಹಿಸಿಕೊಳ್ಳಬೇಕೆಂದು ನಾನು ಕೇಳಬಯಸುತ್ತೇನೆ. ಆಗ ಯಾವ ತೊಂದರೆಗಳು ಇರುವುದಿಲ್ಲ ಅದನ್ನು ಬಹಳ ಚೆನ್ನಾಗಿ ನಿರ್ವಹಣೆ ಮಾಡಿಕೊಂಡು ಹೋಗಬಹುದು.

ಶ್ರೀ ಎ.ಎಸ್.ಗುರುಸ್ವಾಮಿ: ನಾನು ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ; ಮಾನ್ಯ ಆತ್ಮಾನಂದ್‌ರವರು ಹೇಳಿದಂತೆ ಈ 2-3 ಕಿ.ಮೀ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯವರು ವಹಿಸಿಕೊಂಡು, ಇದನ್ನು ಮೇಂಟೇನ್ ಮಾಡಬೇಕೆನ್ನುವ ಪದ್ಧತಿಯನ್ನು ನಾವು ಜಾರಿಗೆ ತರಬೇಕೆಂದು ನಾನು ತಮ್ಮಲ್ಲಿ ಅಪೀಲ್ ಮಾಡಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್: ಇದನ್ನು ಸರ್ಕಾರ ಪರಿಶೀಲಿಸುತ್ತದೆ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ಮಾನ್ಯ ಗುರುಸ್ವಾಮಿಯವರು ಕೇಳಿರುವಂತಹ ಪ್ರಶ್ನೆ ಬಹಳ ಪ್ರಮುಖವಾಗಿದೆ. ಅವರು ಹೇಳುವಂತೆ 3-4 ಇಲಾಖೆಗಳ ಮುಖಾಂತರ ಮೈಸೂರು ನಗರದ ರಸ್ತೆಗಳ ಕೆಲಸ ನಡೆಯುತ್ತಿವೆ. ಯಾವ ಇಲಾಖೆಗೆ ಯಾವ ರಸ್ತೆ ಬರುತ್ತದೆಂದು ಒಂದು ನಾಮಫಲಕವನ್ನು ಹಾಕಬೇಕಾಗಿದೆ.

ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಒಂದು ಮಹಾತ್ಮಾಗಾಂಧಿ ಜೋಡಿ ರಸ್ತೆ ನಿರ್ಮಾಣವಾಯಿತು. ಅದನ್ನು ಉದ್ಘಾಟನೆ ಮಾಡಿ ಒಂದು ವರ್ಷವಾಯಿತು ಅದನ್ನು ಡಾಂಬರೀಕರಣ ಮಾಡಿಲ್ಲ. ಅದನ್ನು ಮಾಡಿರುವ ಉದ್ದೇಶ ಫಲಕಾರಿಯಾಗಿರುವುದಿಲ್ಲ. ಮೈಸೂರು ನಗರದ ಬಹಳ ಪ್ರಮುಖವಾಗಿರುವ ಒಂದು ರಸ್ತೆಯನ್ನು ಯಾವ ಇಲಾಖೆಯವರು ನಿರ್ವಹಿಸುತ್ತಾರೆ ಎನ್ನುವುದೇ ಗೊತ್ತಾಗುವುದಿಲ್ಲ. ಎಡಿಬಿ ಲೋನ್ ತೆಗೆದುಕೊಂಡು ಮಾಡುತ್ತೇವೆಂದು ಹೇಳುತ್ತಾರೆ, ಅದನ್ನು ಯಾವ ಇಲಾಖೆಯವರು ಮಾಡುತ್ತಾರೋ ಒಂದೂ ಗೊತ್ತಾಗುವುದಿಲ್ಲ. ಮೈಸೂರಿನಲ್ಲಿರುವ ಎಲ್ಲಾ ರಸ್ತೆಗಳನ್ನು ಒಂದೇ ಇಲಾಖೆಯ ವ್ಯಾಪ್ತಿಗೆ ತಂದು ಅದನ್ನು ಮಾಡಬೇಕೆಂದು ನಾನು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲೆಯ ರಿವ್ಯೂ ಮೀಟಿಂಗ್‌ಗೆ ಸನ್ಮಾನ್ಯ ಸಚಿವರು ಬಂದಂತಹ ಸಮಯದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಬಂದಾಗಲೂ ಸಹ ಇದರ ಬಗ್ಗೆ ಸಮಗ್ರವಾದಂತಹ ಚರ್ಚೆ ನಡೆಯಿತು. ಕಾರಣವೇನೆಂದರೆ ನಗರಾಪಲಿಕೆಯ ವ್ಯಾಪ್ತಿಯೊಳಗೆ ಬರುವ ಎಲ್ಲಾ ರಸ್ತೆಗಳನ್ನು ನಗರಪಾಲಿಕೆಯವರೇ ಮೇನ್‌ಟೇನ್ ಮಾಡಲು ಸಿದ್ದವಾಗಿರುವಂತಹ ಸಮಯದಲ್ಲಿ ಕೆಲವು ರಸ್ತೆಗಳನ್ನು ಪಿಡಬ್ಲ್ಯೂಡಿಗೆ ಎಂದು ಬಿಟ್ಟು ಅದರ ಅಕ್ಕಪಕ್ಕದ ರಸ್ತೆಗಳನ್ನು ದುರಸ್ತಿ ಮಾಡುತ್ತಾರೆ. ಪಿಡಬ್ಲ್ಯೂಡಿ ರಸ್ತೆಗಳು ದುರಸ್ಥಿಯಾಗದೆ ಹಾಗೆಯೇ ಉಳಿದಿದೆ. ಇದರಲ್ಲಿ ಇನ್ನೊಂದು ವಿಪರ್ಯಾಸವೆಂದರೆ, ಆ ರಸ್ತೆಯೆಲ್ಲಾ ಪಿಡಬ್ಲ್ಯೂಡಿಗೆ ಸೇರಿರುತ್ತದೆ, ಸರ್ಕಲ್ ಮಾತ್ರ ಕಾರ್ಪೊರೇನ್‌ಗೆ ಸೇರಿರುತ್ತದೆ. ಪಿಡಬ್ಲ್ಯೂಡಿಯವರು ಬಂದು ಸರ್ಕಲ್‌ನವರೆಗೆ ಕೆಲಸ ಮಾಡುತ್ತಾರೆ. ನಗರಪಾಲಿಕೆಯವರು ಅದನ್ನು ಕಂಪ್ಲೀಟ್ ರಿಪೇರಿ ಮಾಡದೆ ನಾವು ಮಾಡುವುದಿಲ್ಲವೆಂದು ಹೇಳುತ್ತಾರೆ. ಇದರಿಂದ ಬಹಳ ಸಮಸ್ಯೆಯಾಗಿದೆ. ಏಷಿಯನ್ ಡೆವಲಪಮೆಂಟ್ ಬ್ಯಾಂಕಿನ ಅಡಿಯಲ್ಲಿ 11.20 ಕಿ.ಮೀ ರಸ್ತೆಯನ್ನು ಕೇವಲ ಅಭಿವೃದ್ಧಿಗೋಸ್ಕರವಾಗಿ ತಾವು ಹಸ್ತಾಂತರ ಮಾಡಿರುವುದು ಕಾನೂನಿನ ಚೌಕಟ್ಟಿನೊಳಗಡೆ ಅದರ ಮೇನ್‌ಟೇನೆನ್ಸ್ ಮಾಡುತ್ತಿರುವುದು, ನಗರಪಾಲಿಕೆಯ ವ್ಯಾಪ್ತಿಯೊಳಗೆ ಬರುತ್ತಿಲ್ಲ. ಇದರಿಂದಾಗಿ ಕಾನೂನಿನ ಸಮಸ್ಯೆಯಾಗಿದೆ; ಇದರ ಜೊತೆಗೆ 32 ಕಿ.ಮೀ ರಸ್ತೆಯಲ್ಲಿ ಉಳಿದಂತಹ 21.12 ಕಿ.ಮೀ ರಸ್ತೆ ಇದು ದುರಸ್ತಿಯಾಗದೆ ಹಾಗೆಯೇ ಉಳಿದುಕೊಂಡಿದೆ. ಇದನ್ನು ನಗರಪಾಲಿಕೆಯೇ ಮೇನ್‌ಟೇನ್ ಮಾಡಲು ಸಿದ್ಧವಾಗಿರುವಂತಹ ಸಂದರ್ಭದಲ್ಲಿ ತಾವು ಅದಕ್ಕೆ ಬೇಕಾಗಿರುವಂತಹ ವ್ಯವಸ್ಥೆಯನ್ನು ಕಾನೂನಿನ ಚೌಕಟ್ಟಿನೊಳಗಡೆ ಮಾಡಿ, ಆ ವ್ಯಾಪ್ತಿಯಲ್ಲಿ ಬರುತ್ತಿರುವಂತಹ ರಸ್ತೆಗಳನ್ನು ಪಹಿಸಿಕೊಟ್ಟಿದ್ದೇ ಆದರೆ, ಈ ದ್ವಂದ್ವ ನೀತಿಯು ತಪ್ಪುತ್ತದೆ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲೂ ಅಪೀಲು ಮಾಡಿದ್ದೆವು, ಮತ್ತು ಮಂತ್ರಿಗಳಲ್ಲೂ ಮನವಿ ಮಾಡಿದ್ದೆವು. ಇವತ್ತಿನವರೆಗೆ ಕಾನೂನಿನ ಒಳಗಡೆ ಬರುವಂತಹ ಅವಕಾಶವನ್ನು ಮಾಡಿಕೊಟ್ಟಿರುವುದಿಲ್ಲ. ಯಾವಾಗ ಈ

ಅವಕಾಶವನ್ನು ಮಾಡಿಕೊಡುತ್ತೀರಿ? ಇದರ ಬಗ್ಗೆ ಯಾವಾಗ ಬದಲಾವಣೆಯನ್ನು ತರುತ್ತೀರೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್: ಸನ್ಮಾನ್ಯ ಅಧ್ಯಕ್ಷರೆ, ಮೈಸೂರು ನಗರದಲ್ಲಿ 32 ಕಿ.ಮೀ ರಸ್ತೆಯನ್ನು ದುರಸ್ತಿ ಮಾಡುವಂಥದ್ದು ನಮ್ಮ ಲೋಕೋಪಯೋಗಿ ಇಲಾಖೆಯ ಜವಾಬ್ದಾರಿಯಾಗಿರುತ್ತದೆ. ನಾನು ಮೊನ್ನೆ ದಿನ ಮೈಸೂರು ನಗರಕ್ಕೆ ಹೋಗಿದ್ದಾಗ ವೆಸ್ಟರ್ನ್‌ಗೇಟ್‌ನಲ್ಲಿ, ಪ್ರಿನ್ಸೆಸ್ ಸರ್ಕಲ್‌ನಲ್ಲಿ ಆಯುರ್ವೇದಿಕ್ ಆಸ್ಪತ್ರೆ ಕಾಲೇಜು ರಸ್ತೆ ರೈಲ್ವೆಸ್ಟೇಷನ್ ರಸ್ತೆ ಅಲ್ಲಿ ಕೂಡ ಈಗಾಗಲೇ ನಾವು ಹಣವನ್ನು ಖರ್ಚು ಮಾಡಿ ಕೆಲಸ ಮಾಡುವಂಥದ್ದನ್ನು ಮಾಡಿದ್ದೇವೆ; ಇದು ತಮಗೂ ಸಹ ಗೊತ್ತಿರಬಹುದು, ಏಕೆಂದರೆ I have given a strict instruciton to my officers. ಎಲ್ಲೆಲ್ಲಿ ಪಿಡಬ್ಲ್ಯೂಡಿ ರಸ್ತೆಗಳು ಇದೆ, ಅದನ್ನು ಚೆನ್ನಾಗಿ ದುರಸ್ತಿ ಮಾಡಬೇಕೆಂದು ಹೇಳಿದ್ದೇನೆ. ಇನ್ನು ಎರಡನೆಯದಾಗಿ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕಿನಲ್ಲಿ ಅದರಿಂದ ಆಗತಕ್ಕಂತಹ ರಸ್ತೆಗಳು ಕಾರ್ಪೊರೇಷನ್ ಏರಿಯಾದಲ್ಲಿ ಕೂಡ ತಾವು ಹೇಳಿದಹಾಗೆ 11 ಕಿ.ಮೀ. ರಸ್ತೆಯನ್ನು ಅವರು ತೆಗೆದುಕೊಂಡಿದ್ದಾರೆ. ಇದನ್ನು ನಾವು ಕೂಡ ಹಸ್ತಾಂತರ ಮಾಡುತ್ತಾ ಇದ್ದೇವೆ. ಈಗ ಆಗತಕ್ಕದ್ದು ಏನೆಂದರೆ ಮೂಡಾದಲ್ಲಿ ಬರುವಂಹ ರಸ್ತೆಗಳು, ಕಾರ್ಪೊರೇಷನ್‌ನಲ್ಲಿ ಬರತಕ್ಕಂತಹ ರಸ್ತೆಗಳು, ಪಿಡಬ್ಲ್ಯೂಡಿ ಇವೆಲ್ಲ ಒಂದೇ ಏಜೆನ್ಸಿಯಾದರೆ ಸರಿಯಾಗಿ ಆಗಬಹುದು ಎಂದು ನಮ್ಮ ಅನಿಸಿಕೆಯಾಗಿದೆ. ಇದರ ಬಗ್ಗೆ ಸರ್ಕಾರವು ಪರಿಶೀಲಿಸುತ್ತದೆ, ಆದರೂ ಕೂಡ ಮೈಸೂರು ನಗರಕ್ಕೆ ಇವತ್ತಿನದಿವಸ ಹೆಚ್ಚಿನ ರೀತಿಯಲ್ಲಿ ಈಗ ಸಾಕಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿದ್ದೇವೆ. ಕೆಲಸಕಾರ್ಯಗಳನ್ನು ಮಾಡಿಸುತ್ತಿದ್ದೇವೆ, ಈಗಾಗಲೇ ಆ್ಯಕ್ಷನ್ ಪ್ಲಾನ್‌ನ್ನು ಪ್ರಿಪೇರ್ ಮಾಡಿದ್ದೇವೆ. ತಾವು ಕೂಡ ಆ ಭಾಗದ ಶಾಸಕರಾಗಿದ್ದೀರಿ, ನಾವು ಅಲ್ಲಿಯೂ ಕೂಡ ಕೆಲಸವನ್ನು ಸ್ಟಾರ್ಟ್ ಮಾಡಿದ್ದೇವೆ.

ಬೆಂಗಳೂರು ನಗರದಲ್ಲಿ ತಮಿಳುನಾಡಿನ ಹಾಲು ಮಾರಾಟ ಮಾಡುವುದನ್ನು ತಡೆಗಟ್ಟುವ ಬಗ್ಗೆ

284(2723)

ಶ್ರೀ ಸುಬ್ಬಾರೆಡ್ಡಿ ಕೆ.ಎನ್(ಬಸವನ ಗುಡಿ): ಮಾನ್ಯ ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಹಲವಾರು ಬಡಾವಣೆಗಳಲ್ಲಿ ಪ್ರತಿನಿತ್ಯ ಬೆಳಗಿನ ಜಾವ 3.00 ಗಂಟೆಗೆ ನೆರೆರಾಜ್ಯ ತಮಿಳುನಾಡಿನಿಂದ 1 ಲೀಟರ್‌ಗೆ 3-00 ರೂ.ನಂತೆ ಹಾಲನ್ನು ಮಾರಾಟ ಮಾಡುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ?